**ಕರ್ನಾಟಕ ವಿಧಾನ ಪರಿಷತ್ತು**

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸುನೀಲ್‌ಗೌಡ ಬಿ. ಪಾಟೀಲ್, ದಿನೇಶ್ ಗೂಳಿಗೌಡ, ರಾಜೇಂದ್ರ ರಾಜಣ್ಣ ಹಾಗೂ ಸಲೀಂಅಹ್ಮದ್ ರವರುಗಳು ನಿಯಮ-72 ರಡಿಯಲ್ಲಿ, ನೀಡಲಾದ ಗಮನ ಸೆಳೆಯುವ ಸೂಚನೆಗೆ ಸನ್ಮಾನ್ಯ ಮುಂಖ್ಯ ಮಂತ್ರಿಯವರ ಹೇಳಿಕೆ:**

**ಸೂಚನೆ:** ರಾಜ್ಯದಲ್ಲಿನ ಗ್ರಾಮ ಪಂಚಾಯತ್ ಅಧ್ಯಕ್ಷರು/ಉಪಾಧ್ಯಕ್ಷರ ಹಾಗೂ ಸದಸ್ಯರ ಗೌರವಧನವನ್ನು ಕಳೆದ 05 ವರ್ಷಗಳಿಂದ ಪರಿಷ್ಕರಣೆ ಮಾಡಿರುವುದಿಲ್ಲ, ಹಲವು ವರ್ಷಗಳಿಂದ ಸದರಿಯವರ ಗೌರವಧನವನ್ನು ಹೆಚ್ಚಿಗೆ ಮಾಡಲಾಗುವುದು ಎಂದು ಸರ್ಕಾರ ಆಶ್ವಾಸನೆ ನೀಡುತ್ತಾ ಬಂದಿದ್ದರೂ ಕೂಡ ಇದುವರೆಗೆ ಹೆಚ್ಚು ಮಾಡಿರುವುದಿಲ್ಲ. ಅಲ್ಲದೆ ಈ ಸದಸ್ಯರುಗಳ ಹಲವಾರು ನ್ಯಾಯಬದ್ಧ ಬೇಡಿಕೆಗಳ ಕುರಿತು ಮಾನ್ಯ ಮುಖ್ಯ ಮಂತ್ರಿಗಳಿಂದ ಮಾಹಿತಿಯನ್ನು ಬಯಸಿ ಈ ಸೂಚನೆಗೆ ಗಮನ ಸೆಳೆಯಬಯಸುತ್ತೇವೆ.

ಉತ್ತರ:

**ಗೌರವಧನ ಪರಿಷ್ಕರಿಸುವ ಕುರಿತಂತೆ-** ರಾಜ್ಯದಲ್ಲಿನ ಗ್ರಾಮ ಪಂಚಾಯತ್ ಅಧ್ಯಕ್ಷರು/ಉಪಾಧ್ಯಕ್ಷರ ಹಾಗೂ ಸದಸ್ಯರ ಗೌರವಧನವನ್ನು ಪರಿಷ್ಕರಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ ಹಾಗೂ ಇತರೆ ಬೇಡಿಕೆಗಳಾದ;

**ಉಚಿತ ಬಸ್‌ಪಾಸ್ ನೀಡುವ ಕುರಿತಂತೆ** - ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳು ಗ್ರಾಮ ಪಂಚಾಯತಿ ಕೆಲಸಗಳ ನಿಮಿತ್ತ ಗ್ರಾಮ ಪಂಚಾಯತಿ ಪರಿಮಿತಿಗಳಾಚೆ ಮಾಡಿದ ಪ್ರಯಾಣಗಳಿಗಾಗಿ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರುಗಳ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ) ನಿಯಮಗಳು, 1994 ರನ್ವಯ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

**ವಿಮಾ ಸೌಲಭ್ಯ/ಆರೋಗ್ಯ ಕಾರ್ಡ್ ಸೌಲಭ್ಯ ಕುರಿತಂತೆ**-ರಾಜ್ಯದ ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳಿಗೆ ವಿಮಾ ಸೌಲಭ್ಯ/ಆರೋಗ್ಯ ಕಾರ್ಡ್ ಹಾಗೂ ಕೇರಳ ಮಾದರಿಯ ಸೌಲಭ್ಯಗಳನ್ನು ನೀಡುವ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

ಸಂಖ್ಯೆ:ಗ್ರಾಅಪಂರಾ 424 ಜಿಪಸ 2022

(ಬಸವರಾಜ ಬೊಮ್ಮಾಯಿ)
ಮುಖ್ಯ ಮಂತ್ರಿ